‘ನಾಲ್ಕು ಐವಿಎಫ್ ಫೇಲ್ ಆದವು...!’

‘ಹೌದು, ತುಂಬಾ ನೋವಿನ ಸಂಗತಿ’.

‘ಓಹ್, ಐ ಯಾಮ್ ಸ್ಸಾರಿ!’

ಡಾಕ್ಟರ್ ಹತ್ರ ಹೋಗೋಣ ನಡಿ. ನಮ್ಮ ಚೆಕ್–ಅಪ್ ಮಾಡಿಸಿಕೊಳ್ಳೋಣ. ಮಕ್ಕಳಿಲ್ಲದವರಿಗೆ ಇಂದು ನಾನಾ ವಿಧದ ಪರೀಕ್ಷೆಗಳು ಬಂದಿವೆ ಎಂದು ಲಾರ್ಸ್‌ಗೆ ಹೇಳುತ್ತಲೇ ಇದ್ದೆ. ಲಾರ್ಸ್ ನನ್ನ ಮಾತನ್ನು ಅಲ್ಲಗೆಳೆಯುತ್ತಾ ಹೇಳುತ್ತಿದ್ದ, ‘ನನಗೆ ಮಕ್ಕಳು ಬೇಡ... ಅವನು ನಮಗೆ ಸಾಕು’.

‘ಜೋಶ್‌ನನ್ನು ನಿಮ್ಮ ಮಗನೆಂದು ತಿಳಿಯುವುದಾದರೆ, ಅವನ ವೀಸಾಕ್ಕಾಗಿ ನೀವೇಕೆ ಪ್ರಯತ್ನಿಸುವುದಿಲ್ಲ?’– ನಾನು ಲಾರ್ಸ್‌ನನ್ನು ಪ್ರಶ್ನಿಸುತ್ತಿದ್ದೆ.

ಅವನು ಉತ್ತರಿಸದೆ ಮೌನ ವಹಿಸುತ್ತಿದ್ದ. ರೇಗುತ್ತಲೂ ಇದ್ದ.

ಪಾಲ್, ನಾನು ಅನೇಕ ಮಹಾದ್ವೀಪಗಳಲ್ಲಿದ್ದೆ. ನಾವು ಎಲ್ಲಿದ್ದರೂ ಅನ್ಯಾಯ, ಅವಮಾನ, ವಿಶ್ವಾಸಘಾತುಕತನ, ಜಾತೀಯತೆ ಹೀಗೆ ಅನೇಕ ವಿಧದ ಪೂರ್ವಗ್ರಹಗಳನ್ನು ಸಹಿಸಬೇಕಾಗುತ್ತದೆ ಎಂಬುದನ್ನು ಮನಗಂಡೆ. ಇವು ಮನುಷ್ಯ ತೀರಿಸಲೇ ಬೇಕಾದ ಸಾಲಗಳಾಗಿವೆ. ಕ್ರಮೇಣ ಲಾರ್ಸ್‌ನ ನಿಜರೂಪ ತೆರೆದುಕೊಳ್ಳುತ್ತಿತ್ತು. ಅವನು ಐಟಿಯ ಕಪ್ಪು ವ್ಯವಹಾರವನ್ನು ಮಾಡುತ್ತಿದ್ದ ಎನ್ನಲಾರೆ, ಆದರೆ ಅವನು ಸಾಚಾ ಕೆಲಸವನ್ನಂತೂ ಮಾಡುತ್ತಿರಲಿಲ್ಲ. ಅವನಿಗೆ ಅವನದೇ ಆದ ಕಚೇರಿ ಇರಲಿಲ್ಲ. ಅತ್ತ ಇತ್ತ ಕ್ಲೈಂಟ್ಸ್ ಕಂಪನಿಗಳಿಗೆ ಓಡಾಡುತ್ತಿದ್ದ ಅಥವಾ ಮನೆಯಲ್ಲಿಯೇ ಕೆಲಸವನ್ನು ಮಾಡುತ್ತಿದ್ದ. ಅವನು ತನ್ನ ಬಿಜಿನೆಸ್ ಬಗ್ಗೆ ‘ನನಗೆ ದೊಡ್ಡ ದೊಡ್ಡ ಕಂಪನಿಗಳ ಆಫರ್ ಬರುತ್ತವೆ, ನಾನು ಮೊಬೈಲ್ ಆ್ಯಪ್‌ಗಳ ನಿರ್ಮಾತೃ ಸಹ ಹೌದು’ ಎನ್ನುತ್ತಿದ್ದ. ‘ನನ್ನ ಕಂಪನಿ ಹೊಸ ಹೊಸ ಗ್ರ್ಯಾಂಡ್ ಮೊಬೈಲ್ ಆ್ಯಪ್‌ಗಳನ್ನು ಡೆವಲಪ್ ಮಾಡುತ್ತದೆ, ಅವು ಮೊಬೈಲ್ ಫೋನ್‌ಗಳನ್ನು ಟ್ರ್ಯಾಕ್ ಮಾಡುತ್ತವೆ, ಕಳೆದುಹೋದ ಅಥವಾ ಕಳ್ಳತನವಾದ ಫೋನ್‌ಗಳ ಬಗ್ಗೆ ಹೇಳುತ್ತವೆ. ಡಿಲೀಟ್ ಆದ ಫೋಟೋಗಳನ್ನು ಮರಳಿ ತರುತ್ತವೆ. ಒಬ್ಬರ ಕಾಲ್ ರೆಕಾರ್ಡಿಂಗ್, ಇನ್ನೊಬ್ಬರ ಫೋನ್‌ಗೆ ಕಳುಹಿಸಬಲ್ಲೆವು. ಆ್ಯಪ್‌ನ್ನು ಡೌನ್‌ಲೋಡ್ ಮಾಡಿ ಮೊಬೈಲ್‌ನಲ್ಲಿ ನಿಮಗಿಷ್ಟವಾದ ಹಾಡುಗಳು ಅಥವಾ ಸುದ್ದಿಗಳನ್ನು ಕೇಳಬಹುದು, ಮ್ಯಾಚ್‌ಗಳ ತಾಜಾ ಸ್ಕೋರ್ ಪಡೆಯಬಹುದು. ಪ್ರೆಗ್ನೆಂಟ್ ಮಹಿಳೆಯರು ಗರ್ಭದಲ್ಲಿ ಪ್ರೆಗ್ನೆನ್ಸಿ ಯಾವ ಹಂತದಲ್ಲಿದೆ ಎಂಬುದನ್ನು ನೋಡಬಹುದು’ ಎಂದು ಮನಸಾರೆ ಕೊಚ್ಚಿಕೊಳ್ಳುತ್ತಿದ್ದ.

‘ವಾಹ್!’ ಅನಾಯಾಸವಾಗಿ ನನ್ನ ಬಾಯಿಯಿಂದ ಹೊರಟಿತು.

ಅವನು ಹೆಮ್ಮೆಯಿಂದ ಹೇಳಿದ, ‘ಹೈವೇನಲ್ಲಿ ಪೊಲೀಸರ ಕ್ಯಾಮೆರಾಗಳನ್ನು ಎಲ್ಲಿ ಹಾಕಲಾಗಿವೆ ಎಂಬುದನ್ನು ಸಹ ಟ್ರ್ಯಾಕ್ ಮಾಡುತ್ತವೆ’.

‘ಓಹೋ!’ ನಾನು ಆಶ್ಚರ್ಯ ವ್ಯಕ್ತಪಡಿಸಿದೆ.

‘ಹೂಂ, ವಾಹನಗಳನ್ನು ವೇಗವಾಗಿ ಚಾಲನೆ ಮಾಡುವ ಇಂದಿನ ಯುವಕರು ಈ ಆ್ಯಪ್ ಉಪಯೋಗಿಸುತ್ತಾರೆ. ಈ ಮೂಲಕ ಅವರು ಪೊಲೀಸರ ದಂಡದಿಂದ ಪಾರಾಗಲು ಮತ್ತು ಪೊಲೀಸರ ಕ್ಯಾಮೆರಾಗಳು ಎಲ್ಲೆಲ್ಲಿ ಹಾಕಲಾಗಿವೆ ಎಂಬುದನ್ನು ತಿಳಿದುಕೊಳ್ಳುತ್ತಾರೆ’.

‘ಆದರೆ ಇದು ಇಲ್ಲೀಗಲ್ ಆಗಲಿಲ್ಲವೇ?’ ನಾನು ವಿಚಾರಿಸಿದೆ.

‘ಲೀಗಲ್, ಇಲ್ಲೀಗಲ್ ಏನಾಗಲ್ಲ’ ಅವನು ಬೇಜವಾಬ್ದಾರಿಯಿಂದ ಹೇಳಿದ, ‘ಅನೇಕ ವಿಷಯಗಳು ಒಂದು ದೇಶದಲ್ಲಿ ಬ್ಯಾನ್ ಅಥವಾ ಕಾನೂನುಬಾಹಿರ ಆಗಿರುತ್ತವೆ; ಬೇರೆ ದೇಶದಲ್ಲಿ ಅವು ಲೀಗಲ್ ಆಗಿರುತ್ತವೆ. ಡ್ರಗ್ಸ್, ಪ್ರಾಸ್ಟಿಟ್ಯೂಶನ್, ಕಳ್ಳತನ, ಕಿಡ್ನಿ ಮಾರಾಟ... ಇವು ಅನೇಕ ದೇಶಗಳಲ್ಲಿ ಇಲ್ಲೀಗಲ್ ಆಗಿದ್ದರೆ, ಕೆಲವು ದೇಶಗಳಲ್ಲಿ ಲೀಗಲ್ ಆಗಿವೆ. ಅಂತೆಯೇ ಕೆಲವು ವಿಷಯಗಳು ಒಬ್ಬರ ದೃಷ್ಟಿಯಲ್ಲಿ ಸೂಕ್ತವಾಗಿರುತ್ತವೆ, ಅದೇ ಬೇರೆಯವರ ದೃಷ್ಟಿಯಲ್ಲಿ ತಪ್ಪಾಗಿರುತ್ತವೆ. ತಿಳೀತಾ...?’

ನಾನು ಅವನಿಗೆ ಏನು ಹೇಳುವುದು? ನನಗೆ ಕಂಪ್ಯೂಟರ್, ಐಟಿ, ಸಾಫ್ಟ್‌ವೇರ್ ಬಗ್ಗೆ ಒಳ್ಳೆಯ ಜ್ಞಾನವಿತ್ತು; ಆದರೆ ಅವನ ಮಾತುಗಳನ್ನು ಅರ್ಥ ಮಾಡಿಕೊಳ್ಳುವುದು ನನಗೆ ಕಷ್ಟದ ವಿಷಯವಾಗಿತ್ತು. ಆದರೆ ನನಗೆ ಅವನ ಬಗ್ಗೆ ಕೆಲವು ವಿಷಯಗಳು ತಿಳಿದಿದ್ದವು; ಅವನೇ ಸ್ವತಃ ಯಾವುದೇ ಆ್ಯಪ್ ಡೆವಲಪ್ ಮಾಡುವುದಿಲ್ಲ. ಸೇಲ್ಸ್ ಕೆಲಸವನ್ನಷ್ಟೇ ಮಾಡುತ್ತಾನೆ. ಇಲ್ಲೀಗಲ್ ಕಂಪನಿಗಳಿಗೆ ಅಗ್ಗದ ಮೊಬೈಲ್ ಆ್ಯಪ್ ಸರಬರಾಜು ಮಾಡುತ್ತಾನೆ. ಅವನು ಸೈಕೋಪಾಥ್ ಆಗಿದ್ದು, ತನ್ನ ನಿಜ ಮುಖಕ್ಕಿಂತ ಭಿನ್ನವಾಗಿದ್ದ ಮುಖವಾಡವನ್ನು ಧರಿಸಿದ್ದ.

ನಮ್ಮ ವಿವಾಹವಾಗಿ ಕೆಲವು ತಿಂಗಳುಗಳು ಕಳೆದಿದ್ದವು. ಅದೊಂದು ದಿನ ನಾನು ನನ್ನ ಹಿಂದಿನ ಜೀವನದ ಕೆಲವು ಫೋಟೋಗಳನ್ನು ತೋರಿಸುತ್ತಿದ್ದೆ. ಅಬ್ರಾಹಮ್‌ನ ಎತ್ತರದ ನಿಲುವು, ಅವನ ದಷ್ಟಪುಷ್ಟ ಶರೀರದ ಬಗ್ಗೆ, ಅವನು ಕಾಮೆಂಟ್ ಮಾಡಿದ – ‘ಭಾರತದ ಜನ ತುಂಬಾ ಬಡವರು, ಅವರಿಗೆ ಎರಡು ಹೊತ್ತಿನ ಅನ್ನ ಸಹ ಸಿಗಲ್ಲವೆಂದು ನಾನು ಪುಸ್ತಕಗಳಲ್ಲಿ ಓದಿದ್ದೆ. ಆದರೆ ಇವನು ಹೀಗೆ ಬೆಳೆದಿದ್ದಾನಲ್ಲ, ಇವನಿಗೆ ಅಷ್ಟೊಂದು ಮಾಂಸ ಎಲ್ಲಿಂದ ಸಿಕ್ತು?’

‘ಲಾರ್ಸ್, ನೀವು ಭಾರತದ ಬಗ್ಗೆ ತುಂಬಾ ತಪ್ಪು ಮಾಹಿತಿಯನ್ನು ತಿಳಿದಿದ್ದೀರಿ. ನಿಮ್ಮ ಜ್ಞಾನ ತುಂಬಾ ಸೀಮಿತವಾಗಿದೆ. ಡೆನ್ಮಾರ್ಕ್‌ನ ಜನಸಂಖ್ಯೆ ಐವತ್ತನಾಲ್ಕು ಲಕ್ಷ, ಭಾರತದ ಜನಸಂಖ್ಯೆ ನೂರಾ ಮೂವತ್ತು ಕೋಟಿ. ಇನ್ನೂರಾ ಐವತ್ತು ಡೆನ್ಮಾರ್ಕ್ ಜನ ಭಾರತದಲ್ಲಿದ್ದಾರೆ, ಪ್ರತಿ ವರ್ಷ ನಾಲ್ಕು ಡೆನ್ಮಾರ್ಕ್ ಜನ ಸೇರಿಕೊಳ್ಳುತ್ತಾರೆ. ಭಾರತದಲ್ಲಿ ಎಷ್ಟೊಂದು ವೈವಿಧ್ಯ ಮತ್ತು ವ್ಯಾಪಕತೆಯಿದೆ ಎಂದರೆ, ಯಾವುದನ್ನೂ ಸಾಮಾನ್ಯಗೊಳಿಸಲು ಸಾಧ್ಯವಿಲ್ಲ. ವಿವಿಧ ಪಾಕ ಪದ್ಧತಿಗಳಿವೆ. ನಾವು ಭಾರತದಲ್ಲಿ ನಿಮಗಿಂತ ಉತ್ತಮ ಆಹಾರವನ್ನು ಸೇವಿಸುತ್ತೇವೆ. ಬಿಸಿ ಮತ್ತು ತಾಜಾ ಆಹಾರವನ್ನು ಸೇವಿಸುತ್ತೇವೆ. ವೆರೈಟಿ ಫುಡ್ ತಿನ್ನುತ್ತೇವೆ. ನಿಮ್ಮ ಹಾಗೆ ತಣ್ಣನೆಯ ಮತ್ತು ಹಳಸಿದ ಆಹಾರವನ್ನು ತಿನ್ನಲ್ಲ’.

ನನ್ನ ಈ ಮಾತುಗಳಿಂದ ಅವನ ಸ್ವಾಭಿಮಾನಕ್ಕೆ ಪೆಟ್ಟಾಯಿತು. ಅವನು ರೇಗಿ, ನನ್ನ ಕಪಾಳಕ್ಕೆ ಹೊಡೆದ.

‘ಲಾರ್ಸ್! ನೀನು ನನಗೆ ಹೊಡೆದೆ?’

ಅಂದು ಅವನು ಮೊದಲ ಬಾರಿಗೆ ನನಗೆ ಹೊಡೆದಿದ್ದ. ನನಗೆ ತುಂಬಾ ಆಶ್ಚರ್ಯವಾಗಿತ್ತು. ನನ್ನ ಪತಿ ನನ್ನ ಮೇಲೆ ಕೈ ಮಾಡಬಲ್ಲ! ಇದು ಹಿಂಸೆಯ ಚರಮಾವಸ್ಥೆಯಾಗಿತ್ತು.

ಒಮ್ಮೆ ಎತ್ತಿದ ಪತಿಯ ಕೈ, ಮತ್ತೆ ನಿಲ್ಲುವುದು ಕಷ್ಟಕರ. ಹಿಂಸೆ ಒಂದು ಮಾನಸಿಕ ವಿಕಾರ. ಅವನಿಗೆ ನನ್ನ ಮಾತುಗಳು ಇಷ್ಟವಾಗದಿದ್ದಾಗ, ಕೂಡಲೇ ಕಪಾಳಕ್ಕೆ ಹೊಡೆದುಬಿಡುತ್ತಿದ್ದ, ನನ್ನ ತಲೆಗೂದಲುಗಳನ್ನು ಎಳೆಯುತ್ತಿದ್ದ, ತೋಳನ್ನು ತಿರುಚುತ್ತಿದ್ದ, ನನ್ನನ್ನು ತಳ್ಳುತ್ತಿದ್ದ. ಲಾರ್ಸ್ ಗಿಡ್ಡ ನಿಲುವಿನ ವ್ಯಕ್ತಿಯಾಗಿದ್ದ, ಆದರೆ ಅವನಲ್ಲಿ ತುಂಬಾ ಶಕ್ತಿಯಿತ್ತು, ಹೀಗಾಗಿ ಅವನ ಪ್ರತಿಯೊಂದು ಹೊಡೆತ ಬಲವಾಗಿರುತ್ತಿತ್ತು.

ಸಣ್ಣ ಸಣ್ಣ ವಿಷಯಗಳಿಗೂ ಹಿಂಸ್ರಕನಾಗುವುದು ಮತ್ತು ನನಗೆ ಹೊಡೆಯುವ ಅವನ ಪ್ರವೃತ್ತಿ ಹೆಚ್ಚಿತು. ಅನೇಕ ಬಾರಿ ನನಗೆ, ಅವನಿಗೇಕೆ ಸಿಟ್ಟು ಬರುತ್ತದೆ ಎಂದು ಅರ್ಥವೇ ಆಗುತ್ತಿರಲಿಲ್ಲ. ಸಾಮಾನ್ಯವಾಗಿ ಅಂತರಂಗದ ಕ್ಷಣಗಳಲ್ಲಿ ಪ್ರೀತಿಯನ್ನು ತೋರುವ ವ್ಯಕ್ತಿ ಒಮ್ಮೊಮ್ಮೆ ಇಷ್ಟೇಕೆ ಕ್ರೂರಿಯಾಗುತ್ತಾನೆ? ಅನೇಕ ಬಾರಿ ಅವನು ನನ್ನನ್ನು ಪ್ರೀತಿಸುತ್ತಾನೋ, ಇಲ್ಲವೋ ಎಂದೂ ಅನುಮಾನವಾಗುತ್ತಿತ್ತು. ಆಗ ಅವನ ವರ್ತನೆಯನ್ನು ಕ್ಷಮಿಸದ ಹೊರತು ನನ್ನ ಬಳಿ ಬೇರೆ ಮಾರ್ಗವಿರಲಿಲ್ಲ. ಬಹುಶಃ ಅವನು ನಡುವಯಸ್ಸಿನ ಸಂಕಟದಿಂದ ಹೀಗೆ ಮಾಡುತ್ತಿದ್ದಾನೆ ಎಂದು ಯೋಚಿಸಿದೆ.

ಅವನ ಬಿಜಿನೆಸ್ ಸಹ ಚೆನ್ನಾಗಿ ನಡೆಯುತ್ತಿರಲಿಲ್ಲ, ಹೀಗಾಗಿ ಅವನ ವ್ಯಗ್ರತೆ ಹೆಚ್ಚುತ್ತಿತ್ತು. ಅವನು ಯೂರೋಪಿನಲ್ಲಿ ನಡೆಯುತ್ತಿದ್ದ ಇಲ್ಲೀಗಲ್ ಕಂಪನಿಗಳಿಗೆ ಆನ್‌ಲೈನ್ ಮೊಬೈಲ್ ಆ್ಯಪ್ ಮಾರುತ್ತಿದ್ದ. ಆ ಕಂಪನಿಗಳು ಅವನಿಗೆ ಸಾಕಷ್ಟು ಕಮಿಶನ್ ಕೊಡುತ್ತಿದ್ದವು. ಇದರ ಸುಳಿವು ಪೊಲೀಸರಿಗೆ ಸಿಕ್ಕಿತ್ತು. ಅವನು ಯಾವ ಕಂಪನಿಗಳಿಗೆ ಮೊಬೈಲ್ ಆ್ಯಪ್ ಮಾರುತ್ತಿದ್ದನೋ, ಆ ಕಂಪನಿಗಳು ಭೂಗತವಾದವು, ಇದರಿಂದ ಸಹ ಅವನ ಬಿಜಿನೆಸ್ ಕುಂಠಿತಗೊಂಡಿತ್ತು.

ಇದರಲ್ಲಿ ನನ್ನ ತಪ್ಪೇನೂ ಇರಲಿಲ್ಲ. ನಾನು ಅವನಿಗೆ, ನಾನೀಗ ಸಂಪಾದನೆ ಮಾಡುತ್ತಿರುವುದು ನಮ್ಮಿಬ್ಬರಿಗೆ ಸಾಕು ಎಂದೆ. ಆದರೆ ಅವನು, ನನ್ನ ಅಸಫಲತೆಗೆ ನೀನೇ ಕಾರಣ ಎಂದು ನನ್ನ ಮೇಲೆಯೇ ಆರೋಪವನ್ನು ಹೊರಿಸುತ್ತಿದ್ದ. ತನ್ನ ಸಿಟ್ಟನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವಲ್ಲಿ ಅಸಮರ್ಥನಾಗಿದ್ದ ಅವನು ಬೆಂಕಿಯನ್ನು ಕಾರುತ್ತಿದ್ದ. ಹೀಗೆ ಅವನು ನನ್ನನ್ನು ಹೊಡೆದ, ರಕ್ತ ಬರುವಂತೆ ಹೊಡೆದ ತುಂಬಾ ಘಟನೆಗಳಿವೆ. ನಾನು ಒಂದೆರಡು ಘಟನೆಗಳನ್ನು ಹೇಳುತ್ತೇನೆ, ಇದರಿಂದ ಪಾಲ್, ನಾನು ಎಂಥ ಯಮಯಾತನೆಯನ್ನು ಅವನೊಂದಿಗೆ ಅನುಭವಿಸುತ್ತಿದ್ದೆ ಎಂಬುದನ್ನು ನೀವು ಊಹಿಸಬಹುದು. (ಸಶೇಷ)